ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸರ್ಕಾರದ ಹಣವನ್ನು ಇದರಲ್ಲಿ ತೊಡಗಿಸಿ ಯೋಜನೆಯನ್ನು ಪೂರೈಸಿ ನಂತರ ಕೇಂದ್ರ ಸರ್ಕಾರದ ಪರರಾಷ್ಟ್ರಗಳ ಸಹಾಯದಿಂದ ಬಂದಂತಹ ಹಣವನ್ನು ರೀಇಂಬರ್ಸ್‌ಮೆಂಟ್ ಮಾಡಬಹುದಲ್ಲ.

(ಉತ್ತರ ಇಲ್ಲ)

ಹರಪನಹಳ್ಳಿಯಲ್ಲಿ ಸರ್ಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಕಟ್ಟಿಸುವ ಬಗ್ಗೆ

೫೪. ಶ್ರೀ ಬಿ.ಎಚ್. ಪೆಂಕಾನಾಯ್ಕ (ಹರಪನಹಳ್ಳಿ) ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹರಪನಹಳ್ಳಿ ಸರಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಕಟ್ಟಡವನ್ನು ಪ್ರಾರಂಭಿಸುವುದಕ್ಕೆ ಹರಪನಹಳ್ಳಿ ನಗರದ ಪುರಸಭೆಯವರು ಕಟ್ಟಡ ಕಟ್ಟಲು ಜಮೀನು ಕೊಟ್ಟಿರುತ್ತಾರೆಯೇ ?

(ಆ) ಹಾಗಿದ್ದಲ್ಲಿ ತ್ವರಿತವಾಗಿ ಕಟ್ಟಡ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು).—

(ಅ) ಈ ವಿಷಯ ಸರ್ಕಾರಕ್ಕೆ ತಿಳಿದಿಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸ್ವಾಮಿ, ಒಂದು ಎಕರೆ ೩೭ ಗುಂಟೆ ಜಮೀನನ್ನು ಪುರಸಭೆಯವರು ಈ ಕಟ್ಟಡವನ್ನು ಕಟ್ಟುವುದಕ್ಕೆ ಕೊಟ್ಟಿದ್ದಾರೆಂದು ಈಗತಾನೇ ನಮ್ಮ ಆಯುಕ್ತರವರ ಕಛೇರಿಯಿಂದ ಬಂದಂತಹ ವರದಿ ತಿಳಿಸುತ್ತದೆ. ವರಡನೆಯದಾಗಿ, ಚಾಗ ಕೊಟ್ಟಿದ್ದರೂ ಕೂಡ ಈ ಕಟ್ಟಡ ಕಟ್ಟುವುದಕ್ಕೂ ಸ್ಕೂಲಿಗೆ ಬೇಕಾಗಿರತಕ್ಕಂತಹ ಅಂದಾಜಾಗಲೀ, ಹಾಗೂ ಮೆಚ್ಚಣವಾಗಲೀ ಸರ್ಕಾರಕ್ಕೆ ಬಂದಿರುವುದಿಲ್ಲ.

ಶ್ರೀ ಬಿ.ಎಚ್. ಪೆಂಕಾನಾಯಕ್.—ಆ ಬಗ್ಗೆ ಅಂದಾಜು ಮೆಚ್ಚಣವನ್ನು ಕಳುಹಿಸಿಕೊಡುತ್ತೇವೆ. ದಯಮಾಡಿ ಕಟ್ಟಡವನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇಂತಹದ್ದೇ ಮೂರು ಕಟ್ಟಡಗಳು ಆ ಭಾಗದಲ್ಲಿ ಆಗಬೇಕಾಗಿರುವುದರಿಂದ, ಅವುಗಳ ಪೈಕಿ ಇದೂ ಕೂಡ ಅದಕ್ಕೆ ಹೊಂದಿಕೊಂಡಿರುವುದರಿಂದ ಪರಿಶೀಲನೆ ಮಾಡುತ್ತೇನೆ.

ಹೊಸನಗರ ಕ್ಷೇತ್ರಕ್ಕೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವ ಬಗ್ಗೆ

೫೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹೊಸನಗರ ಕ್ಷೇತ್ರಕ್ಕೆ ಈವರೆಗೆ ಎಷ್ಟು ಕುಡಿಯುವ ನೀರಿನ ಬಾವಿಗಳನ್ನು ಕೊಡಲಾಗಿದೆ.

(ಆ) ಹಾಗಿದ್ದರೆ ಅವುಗಳೆಲ್ಲವೂ ಕಾರ್ಯಗತವಾಗಿದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

(ಅ) ಹೊಸನಗರ ಕ್ಷೇತ್ರಕ್ಕೆ ಈವರೆಗೆ ಒಟ್ಟು ೩೦೬ ಬಾವಿಗಳನ್ನು ಒದಗಿಸಲಾಗಿದೆ.

(ಆ) ಮೇಲೆ ನಮೂದಿಸಿರುವ ಬಾವಿಗಳ ಪೈಕಿ ೨೫೭ ಬಾವಿಗಳ ಕೆಲಸ ಪೂರ್ಣಗೊಂಡಿದೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಹೊಸನಗರ ಪಟ್ಟಣದಲ್ಲೂ ಕೂಡ ಯಾವ ಬಾವಿಗಳೂ ಕೆಲಸ ಮಾಡುತ್ತಿಲ್ಲ. ಅವುಗಳ ಜೊತೆಯಲ್ಲಿ ಈ ಬಾವಿಗಳನ್ನು ತೆಗೆದಿದ್ದರೂ ಕೂಡ ಅನೇಕ ದಿವಸಗಳಿಂದ ಬಾವಿಯಲ್ಲಿ ನೀರಿನ ಮಟ್ಟ ಬಹಳ ಕೆಳಗಡೆಗೆ ಹೋಗಿದೆ. ಒಂದು ಬಾವಿಯಲ್ಲಿ ನೀರೇ ಬರುವುದಿಲ್ಲ, ನೀರಿನ ಪರಿಸ್ಥಿತಿ ಬಹಳ ಬಿಕ್ಕಟ್ಟಾಗಿದೆ. ಹೊಸನಗರ ಪಟ್ಟಣದಲ್ಲಿ ಮೂರು ದಿವಸಗಳಿಂದಲೂ ನೀರು ಇಲ್ಲ, ಎಂಬುದಾಗಿ ನನಗೆ ಟೆಲಿಗ್ರಾಂ ಬಂದಿದೆ. ಇವತ್ತು ಬೆಳಗ್ಗೆ ಫೋನ್ ಕೂಡ ಬಂದಿದೆ. ಮತ್ತು ಮೂರು ದಿವಸಗಳಿಂದ ವಿದ್ಯುಚ್ಛಕ್ತಿ ಕೂಡ ಇಲ್ಲ ಎಂಬುದಾಗಿಯೂ ನನಗೆ ವರ್ತಮಾನ ಬಂದಿದೆ. ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾದ ಪರಿಸ್ಥಿತಿಗೆ ಬಂದಿದೆ ಎಂಬುದಾಗಿ ತಿಳಿಸಿದ್ದಾರೆ. ಇದನ್ನು ಕೂಡಲೇ ಸರಿಪಡಿಸುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಹೊಸನಗರ ಪಟ್ಟಣದ ಕುಡಿಯುವ ನೀರಿನ ಬಗ್ಗೆ ನನ್ನ ಸಹೋದ್ಯೋಗಿಗಳು ಕ್ರಮ ತೆಗೆದುಕೊಳ್ಳುತ್ತಾರೆ. ಹಳ್ಳಿಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕಂತಹ ಸಲಹೆಯನ್ನು ಪೂರ್ಣವಾಗಿ ನಮ್ಮ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ, ಸ್ವಾಮಿರಾವ್.—ಅಲ್ಲಿರತಕ್ಕಂತಹ ಕೊಳವೆ ಭಾವಿಗಳೂ ಕೂಡ ಕೆಲಸ ಮಾಡುತ್ತಿಲ್ಲ. ಪೈಪುಗಳನ್ನೆಲ್ಲಾ ಕಿತ್ತುಕೊಂಡು ಹೋಗಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕುಡಿಯುವ ನೀರಿನ ಬಾವಿಗಳ ಬಗ್ಗೆ ಉತ್ತರವನ್ನು ಒದಗಿಸಿದ್ದೇನೆ. ಕೊಳವೆ ಬಾವಿಗಳ ಬಗ್ಗೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಕಾರ್ಯಗತ ಗೊಳಿಸುತ್ತೇನೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಮಲೆನಾಡು ಭಾಗದಲ್ಲಿ ವಿಶೇಷವಾಗಿ ಕೊಳವೆ ಬಾವಿಗಳು ಫಲಪ್ರದವಾಗುವುದಿಲ್ಲ. ತಾವು ಹೇಳಿದ ಪ್ರಕಾರ ೩೦೬ ಬಾವಿಗಳಲ್ಲಿ ೨೫೭ ಬಾವಿಗಳಲ್ಲಿ ನೀರು ಬರುತ್ತದೆಂದು ಹೇಳಿದ್ದೀರಿ...

ಶ್ರೀ ಅಬ್ದುಲ್‌ನಜೀರ್ ಸಾಬ್.—ನಾನು ಹೇಳಿರುವುದು ಕೊಳವೆ ಬಾವಿಗಳನ್ನಲ್ಲ. ತೆರೆದ ಬಾವಿಗಳು.

ಸಹ್ಯಾದ್ರಿ ವಿಶ್ವವಿದ್ಯಾನಿಲಯ ಸ್ಥಾಪಿಸುವ ಬಗ್ಗೆ

೫೬. ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಸಹ್ಯಾದ್ರಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ನಿರ್ಧರಿಸಲಾಗಿದ್ದು ಸರ್ಕಾರ ಈ ದಿಕ್ಕಿನಲ್ಲಿ ಇದುವರೆಗೆ ಯಾವ ಕ್ರಮ ಕೈಗೊಂಡಿದೆ. ಇದಕ್ಕಾಗಿ ಸರಕಾರ ಮಸೂದೆಯನ್ನು ಇದೇ ಅಧಿವೇಶನದಲ್ಲಿ ಮಂಡಿಸುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—ಎಲ್ಲ ದೃಷ್ಟಿಗಳಿಂದ ಪರೀಕ್ಷಿಸಿ, ಕೇಂದ್ರ ಸರ್ಕಾರ ಮತ್ತು ಯು.ಜಿ.ಸಿ.ಯವರೊಡನೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ ಬಗ್ಗೆ ವಿವರವಾಗಿ ಪರಿಶೀಲಿಸಿದ ನಂತರ ಸಧ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ೧೯೮೩-೮೪ನೇ ಈ ವರ್ಷ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಒಪ್ಪಿಗೆ ಇಲ್ಲವೆಂದು ಕಂಡುಬಂದಿದ್ದರಿಂದ ಮಸೂದೆಯನ್ನು ಮಂಡಿಸುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ಆನಂದರಾವ್.—ದಿನಾಂಕ ೧೩-೩-೧೯೮೨ರಂದು ಮುಖ್ಯ ಮಂತ್ರಿಗಳು ಶಿವಮೊಗ್ಗಕ್ಕೆ ಬಂದಿದ್ದಾಗ ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದು ಶಿವಮೊಗ್ಗ ಜಿಲ್ಲೆಯ ಜನಗಳ ಬಹಳ ದಿವಸಗಳ ಆಸೆಯೂ ಹೌದು. ಬಹಳ ದಿವಸಗಳಿಂದ ಇರತಕ್ಕಂತಹ ಆಸೆಯನ್ನು ಈಡೇರಿಸಬೇಕೆಂದು ವಿದ್ಯಾ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಹಿಂದಿನ ಮಂತ್ರಿಮಂಡಲದವರು ಅನೌಪಚಾರಿಕವಾಗಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದಾರೆ. ಅದು ಆದಮೇಲೆ ಅದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಪೂರ್ವ ಸಿದ್ಧತೆಗೆ ಒದಗಿಸಲಾಗಿದೆ. ಅದರ ಒಂದು ಆಧಾರದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರವರಿಂದ ಒಂದು ವರದಿಯನ್ನೂ ಕೂಡ ಇದರ ಬಗ್ಗೆ ತರಿಸಲಾಗಿದೆ. ಆ ವರದಿ ಪ್ರಕಾರ ಇವತ್ತು ನಾವು ಅಲ್ಲಿ ಸಾಮಾನ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೇ ಅಥವಾ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆ ಎನ್ನುವ ಹಂತದಲ್ಲಿ ಹಿಂದಿನ ಮಂತ್ರಿಮಂಡಲ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಈ ಸರ್ಕಾರ ಆ ವಿಷಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಮತ್ತು ಯು.ಜಿ.ಸಿ.ಯವರು ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡತಕ್ಕಂತಹ ಕಾಲದಲ್ಲಿ ನಮ್ಮ ಅನುಮತಿ ಇಲ್ಲದೆ ಮಾಡಕೂಡದು ಎಂಬುದಾಗಿ ಹೇಳಿರುವುದರಿಂದ ನಾವು ಅವರ ಅನುಮತಿಯನ್ನು ಕೇಳಿದ್ದೇವೆ. ಅವರು ಅನುಮತಿಯನ್ನು ಕೊಡದಿದ್ದರೆ ಈ